
SERVICE ABOVE SELF

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand | Rtn. K. Sooryanarayana Udpa | Rtn. N.G. Usha | Rtn. M. Madhavachar |
|---|---|---|---|
| District Governor 2024-25 | President, Mob: 99009 66114 | Secretary, Mob : 81975 92278 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –16 ದಿನಾಂಕ : 30–10–2024


## ದಿನಾಂಕ: 30.10.2024 ರ ವಾರದ ಸಭೆಯ ವರದಿ

ದಿನಾಂಕ: 30.10.2024 ರಂದು 18 ನೇ ಸಭೆ, ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮದಂದು ಜಾನಪದ ಗಾನ ವೈಭವ ಎಂಬ ವಿಶೇಷ ವಿನೂತನ ಕಾರ್ಯಕ್ರಮ. ಖ್ಯಾತ ಜಾನಪದ ಗಾಯಕ, ರಾಜ್ಯ ಪ್ರಶಸ್ತಿ ವಿಜೇತರಾದ ಶ್ರೀ.ಕೆ.ಯುವರಾಜ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಜಾನಪದ ಗೀತೆ ಗಾಯನ, ವ್ಯಾಖ್ಯಾನ, ಗೀತೆಗಳಲ್ಲಿನ ಭಾವನೆಗಳ ವಿವರಣೆಗಳೊಂದಿಗೆ ಮತ್ತಿತರೆ ರೋಟರಿಯ ಕಾರ್ಯಕ್ರಮಗಳು ನಡೆದವು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಅಧ್ಯಕ್ಷತೆ ವಹಿಸಿದ್ದು, ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ವೇದಿಕೆಯಲ್ಲಿದ್ದರು. ಅಂದಿನ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿ ನೆರವೇರಿತು.



ಶ್ರೀಮತಿ ಶ್ರೀದೇವಿ ಭಟ್‌ರವರು "ನಮೋ ನಮೋ ಗಜಮುಖ ಗಣಪನಿಗೆ ನಮೋ" ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥನೆ ಮಾಡಿದರು. ಮಾಜಿ ಅಧ್ಯಕ್ಷರಾದ ರೊ.ವೈ.ಗೋಪಾಲಕೃಷ್ಣ ಗುಪ್ತರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಪ್ರಕಟಣೆಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ನಗರದ ಶಿವಮೊಗ್ಗ ಟೈಂಸ್‌ನ ಸಂಪಾದಕರಾದ ಶ್ರೀ ಎಸ್. ಚಂದ್ರಕಾಂತರವರಿಗೆ ನಮ್ಮ ಕ್ಲಬ್‌ನ ಗೌರವ ಸದಸ್ಯತ್ವವನ್ನು ನೀಡಲಾಯಿತು. ರೊ. ವೈ.ವಿ. ವೆಂಕಟರಮಣ ಜೋಯ್ಸ್‌ರವರು ಶ್ರೀ ಚಂದ್ರಕಾಂತ್‌ರವರ ಪರಿಚಯ ಮಾಡಿದರು. ರೊ. ಕಿಶೋರ್ ಶೀರನಾಳಿಯವರು ಶ್ರೀ ಚಂದ್ರಕಾಂತ್‌ರವರಿಗೆ ನೂತನ ಸದಸ್ಯರು ಎಂದಿರುವ ಪಟ್ಟಿಯನ್ನು ಹಾಗೂ ರೋಟರಿ ಪಿನ್ ತೊಡಿಸಿದರು. ಅಧ್ಯಕ್ಷರು ರೋಟರಿ ಸಾಹಿತ್ಯವನ್ನು ಶ್ರೀ ಚಂದ್ರಕಾಂತ್‌ರವರಿಗೆ ನೀಡಿದರು. ರೊ. ಟಿ.ಕೆ.ಎಂ. ಭಟ್‌ರವರು ವೇದಿಕೆಗೆ ಆಗಮಿಸಿ ಅಧ್ಯಕ್ಷರಿಂದ ಹುಟ್ಟು ಹಬ್ಬದ ಶುಭಾಶಯ ಸ್ವೀಕರಿಸಿದರು. ರೊ. ಟಿ.ಆರ್. ಅಶ್ವಥನಾರಾಯಣರವರು ಶ್ರೀ ಕೆ. ಯುವರಾಜ್‌ರವರ ಪರಿಚಯ ಮಾಡಿದರು.

ಶ್ರೀ ಕೆ. ಯುವರಾಜ್‌ರವರು ಜಾನಪದದ ಬಗ್ಗೆ ಕೆಲವೊಂದು ವಿಷಯಗಳನ್ನು ತಿಳಿಸಿ, ಈ ಕೆಳಕಂಡಂತೆ ಜಾನಪದ ಗೀತೆಗಳನ್ನು ಪ್ರಸ್ತುತಪಡಿಸಿದರು.





- ಬೆಳಗಾಗಿ ಬೆಳ್ಳಿಯ ಚುಕ್ಕಿ ಉದಯದ ಬಳಿಕ ಕೋಳಿ ಕೂಗಿತಕ್ಕ ನಂದನವನಕ– ಎಂಬ ಹಾಡನ್ನು ಹಾಡಿ ಅದರ ವಿವರಗಳನ್ನು ವಿಶ್ಲೇಷಣೆ ಮಾಡಿದರು. ಜನಪದರು ಹಾಡುಗಳನ್ನು ಕಟ್ಟುವಾಗ ಪ್ರಕೃತಿಯನ್ನು ನಮ್ಮ ಪುರಾಣಗಳಿಗೆ ಹೋಲಿಸಿ ತುಲನೆ ಮಾಡಿ ನಿತ್ಯಜೀವನದ ನಡವಳಿಕೆಗಳೊಂದಿಗೆ ತಮ್ಮ ಆಡು ಮಾತಿನಿಂದಲೇ ರಚನೆ ಮಾಡುತ್ತಿದ್ದರು. ಅದು ಬಾಯಿಂದ ಬಾಯಿಗೆ ಹರಿದಾಡಿ ಜನಪದ ಗೀತೆಗಳಾಗಿವೆ ಎಂದರು. ಇಲ್ಲಿ ಹಾಡಿನಲ್ಲಿ ಬರುವ ಬೀಸುವ ಕಲ್ಲಿನ ತತ್ವವನ್ನು ಮನಮುಟ್ಟುವಂತೆ ವಿವರಿಸಿದರು.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 06-11-2024 ಬುಧವಾರ** **ಸಂಜೆ 6:45**

### ಕನ್ನಡ ರಾಜ್ಯೋತ್ಸವ ಪ್ರಯುಕ್ತ ಸದಸ್ಯರಿಗೆ ರಸಪ್ರಶ್ನೆ

### ಥಟ್ ಅಂತ ಹೇಳಿ

ನಡೆಸಿಕೊಡುವವರು: ನಮ್ಮ ಕ್ಲಬ್‌ನ ಸದಸ್ಯರಾದ

**ರೊ. ವಿ. ಶ್ರೀನಿವಾಸ್**

ಪಿ.ಪಿ.ಟಿ ಪ್ರಸ್ತುತಿಯಲ್ಲಿ ಸ್ಪರ್ಧೆ ಇರುತ್ತದೆ.

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

**ಸ್ಥಳ: ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ




◆ ದೇವರುಗಳನ್ನು ಒಲೈಸಿಕೊಳ್ಳಲು ದೇವರ ಬಗ್ಗೆ ಮುನಿಸಿಕೊಂಡು ಹೇಳಿರುವ ಅಥವಾ ಕಟ್ಟಿರುವ ಹಾಡುಗಳು "ಯಾಕೆ ಜಗದಂಬ ನಮ್ಮ ಮನೆಗೆ ಬರುವುದಿಲ್ಲ. ಮನೆಗೆ ಬಂದು ಮುದ್ದಾಡಿ ಹೋಗು ಎಂಬ ಗೀತೆಯನ್ನು ಪ್ರಸ್ತುತ ಪಡಿಸಿದರು.

◆ ರೋಟರಿಯ ಅಭಿಯಾನ ಪಲ್ಸ್ ಪೋಲಿಯೋಕ್ಕೆ ರೊ.ಪಿಡಿಜಿ. ಡಾ.ನಾರಾಯಣರವರ ಸಲಹೆ ಹಾಗೂ ಕರೆಯಂತೆ ಸುಮಾರು 11 ವರ್ಷಗಳ ಕಾಲ ಹಾಡಿದ್ದೇನೆ. ಅವರ ಸಲಹೆಯಂತೆ ಒಂದು ಪದ ಜೀವಾಮೃತ ಎಂಬುದನ್ನೇ ಆಧಾರವಾಗಿಟ್ಟುಕೊಂಡು ರಚಿಸಿದ ಹಾಡುಗಳು ಜನಪ್ರಿಯವಾಗಿವೆ. ಜನತೆಗೆ ಮುಟ್ಟಿದೆ ಎಂದರು.

◆ ಹೆಣ್ಣುಮಕ್ಕಳು ಹೇಳುವ ಜಾನಪದ ಹಾಡಿನ ಬಗ್ಗೆ ಮಾತನಾಡುತ್ತಾ ಇದು ನನ್ನ ಮನೆ ಹಂಗಿನರಮನೆಯಲ್ಲ. ಹೊಂಗೆ ಮರದಡಿಯ ಗುಡಿಸಲು" ಎಂಬ ಹಾಡನ್ನು ಸುಶ್ರಾವ್ಯವಾಗಿ ಹಾಡಿದರು.

◆ ಜೀವಾಮೃತ ಎಂಬ ಪದವನ್ನು ಆಧಾರವಾಗಿಟ್ಟುಕೊಂಡು, ತಾಯಿಯ ಮೇಲಿನ ಹಾಡು–ಅವ್ವ ನೀ ನನ್ನ ಜೀವಾಮೃತ – ನನ್ನ ಬಾಳ ಜೀವಾಮೃತ ಎಂಬ ಹಾಡು ಆಗಮಿಸಿದ್ದ ರೋಟರಿ ಬಂಧುಗಳನ್ನು ಮುದಗೊಳಿಸಿತು.

◆ ಹೆಣ್ಣು ಮಗುವೊಬ್ಬಳು ಬಸುರಿಯಾದಾಗ ಹಾಡು–ಮೊದಲನೇ ತಿಂಗಳು ಏನಾಗುತ್ತೈತೆ ರಘುರಾಮ ಎಂಬ ಹಾಡು ಪ್ರತಿಯೊಂದೂ ತಿಂಗಳಿನ ವೈವಿಧ್ಯತೆಯನ್ನೊಳಗೊಂಡ ಹೆಣ್ಣಿನ ದೇಹದಲ್ಲಿ ಆಗುವ ಬದಲಾವಣೆ ಮತ್ತು ಆಸೆಗಳ ಬಗ್ಗೆ ತಿಳಿಸುತ್ತದೆ. ಅಮೇರಿಕಾದಲ್ಲಿ ಅಕ್ಕ ಸಮ್ಮೇಳನದಲ್ಲಿ ತಾವು ಈ ಹಾಡನ್ನು ಹಾಡಿ ಅಲ್ಲಿನ ಕನ್ನಡಿಗರ ಮನಸ್ಸನ್ನು ಸೂರೆಗೊಂಡು ಪ್ರಶಂಸೆಯ ಸುರಿಮಳೆಯಾದದ್ದು ತಿಳಿಸಿ, ಅಮೇರಿಕ ಕನ್ನಡಿಗರ ಸಾಹಿತ್ಯದ ಹೃದಯಕ್ಕೆ ಮನಸೋತಿದ್ದೇನೆ ಎಂದರು.

◆ ಸುಂದರವಾದ ಹೆಣ್ಣಿನ ಬಗ್ಗೆ ಜನಪದರ ಹಾಡು "ಯಾವದೇಶದ ಹೆಣ್ಣೋ ಇವಳು ರಂಗಿಲಾಲ ಕುಂತಳ ಕುದುರಿ ಮ್ಯಾಲ ಮಾಡುತ್ತಾಳೆ ಡೌಲ ಕುಣಿದ್ಹಾಂಗೆ ನವುಲ' ಎಂಬ ಬಹಳ ವೇಗದ ಹಾಡನ್ನು ಹಾಡಿದರು.

◆ ಹೆಣ್ಣು ಮಕ್ಕಳು ತವರನ್ನು ಬಿಟ್ಟು ಗಂಡನ ಮನೆಗೆ ಹೊರಟಾಗಿನ ಹಾಡು "ಮಗಳ ಮದುವೆ ಮಾಡಿ ಮುತ್ತ ಕಳಕೊಂಡೆ" ಎಂಬ ಗೀತೆತಾಯಿಯ ದು:ಖ ದುಮ್ಮಾನಗಳನ್ನು ತೆರೆದಿಡುವಂತಾಗುವ ಜನಪದ ಹಾಡುಗಳು ಭಾವನೆಗಳನ್ನು ತುಂಬುತ್ತದೆ ಎಂದರು.




ಇದೇ ಸಂದರ್ಭದಲ್ಲಿ ರೊ.ಪಿಡಿಜಿ ಡಾ.ಪಿ.ನಾರಾಯಣರವರು ಯುವರಾಜರ ಬಗ್ಗೆ ಮಾತನಾಡುತ್ತಾ 2000–2011 ರವರೆಗೆ ಇಡೀ ರಾಜ್ಯದಾದ್ಯಂತ ಪಲ್ಸ್ ಪೋಲಿಯೋಕ್ಕೆ ಪ್ರಚಾರಕ್ಕೆ ಶ್ರೀ ಯುವರಾಜ್‌ರವರು ನಿಂತಿದ್ದರು. ಜನಗಳ ಕಲ್ಪನೆಯನ್ನು ಅರ್ಥಮಾಡಿಕೊಂಡು ಹಾಡುಗಳನ್ನು ಹುಟ್ಟು ಹಾಕಿ ಶ್ರೀ ಕೆ. ಯುವರಾಜ್‌ರವರು ಪ್ರಚಾರದ ಕೆಲಸ ಮಾಡಿ ಸುಮಾರು 11 ಕ್ಯಾಸೆಟ್‌ಗಳನ್ನು ಹೊರತಂದಿದ್ದಾರೆ. ಪ್ರಾರಂಭದ ವರ್ಷಗಳಲ್ಲಿ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಎಸ್. ಎಂ. ಕೃಷ್ಣರವರು ಆ ಕ್ಯಾಸೆಟ್‌ಗಳನ್ನು ಕೇಳಿದ್ದರು. ಪೋಲಿಯೋ ನಿರ್ಮೂಲನೆಯಲ್ಲಿ ಯುವರಾಜರ ಪಾತ್ರವಿದೆ ಎಂದರು. ಸುಮಾರು 11 ವರ್ಷ ವಿವಿಧ ರೀತಿಯ ಹಾಡುಗಳನ್ನು ಕಟ್ಟಲಾಗಿದೆ ಎಂದರು. ನಂತರ ಶ್ರೀ ಕೆ.ಯುವರಾಜರು ಮಾತನಾಡುತ್ತಾ ಜನಪದದ ಹಾಡುಗಳು ಎಂದು ಮುಗಿಯಲಾರವು, ಜನರ ಮನದಲ್ಲಿಳಿದು ಮುಂದುವರೆಯುತ್ತದೆ ಎಂದು ತಿಳಿಸಿ ತಮ್ಮ ಮಾತನ್ನು ಹಾಡನ್ನು ಸಮಾಪ್ತಿಗೊಳಿಸಿದರು.

ಇತ್ತೀಚೆಗೆ ಶಿಕಾರಿಪುರ ಕದಂಬ ರೋಟರಿ ಕ್ಲಬ್ ಪ್ರಾಯೋಜಿತ ರೋಟರಿ ವಲಯ ಮಟ್ಟದಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನಮ್ಮ ಕ್ಲಬ್‌ನ ಸದಸ್ಯರಾದ ರೊ. ವನಿತಾ ಸಂದೀಪ್‌ರವರು ಭಾವಗೀತೆಯಲ್ಲಿ ಎರಡನೇ ಬಹುಮಾನ ಮತ್ತು ರೊ.ಎಂ.ಎನ್.ಎಸ್. ಮಣಿಯವರು ಚಿತ್ರಗೀತೆಯಲ್ಲಿ ಎರಡನೇ ಬಹುಮಾನ ಪಡೆದರು. ಅವರುಗಳನ್ನು ವೇದಿಕೆಗೆ ಆಹ್ವಾನಿಸಿ ಬಹುಮಾನಗಳನ್ನು ನೀಡಲಾಯಿತು. ಅಲ್ಲದೇ ಅವರೀರ್ವರು ತಮ್ಮ ಹುಟ್ಟು ಹಬ್ಬದ ನೆನಪಿನ ಕಾಣಿಕೆಗಳನ್ನೂ ಸಹ ಸ್ವೀಕರಿಸಿದರು.

ಈ ತಿಂಗಳಿನಲ್ಲಿ ನಮ್ಮ ಈ ಕೆಳಕಂಡ ರೋಟರಿ ಬಂಧುಗಳು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಿಕೊಂಡಿದ್ದು, ನಿಯೋಜಿತ ಅಧ್ಯಕ್ಷರಾದ ರೊ. ಆನಂದರವರು ಅವರುಗಳನ್ನೆಲ್ಲಾ ವೇದಿಕೆಗೆ ಆಹ್ವಾನಿಸಿದರು. ರೊ. ಹೆಚ್.ಎಸ್. ಮೋಹನ್ ಮತ್ತು ರೊ. ಎಂ.ಎನ್. ಎಸ್. ಮಣಿಯವರು ದಂಪತಿಗಳ ಕುಣಿತಕ್ಕೆ ಅನುವಾಗುವಂತೆ ಚಿತ್ರಗೀತೆಗಳನ್ನು ಧ್ವನಿಯನ್ನು ಹಿನ್ನೆಲೆಯಲ್ಲಿ ಮೊಬೈಲ್ ಮೂಲಕ ಒದಗಿಸಿದರು. ಅದಕ್ಕೆ ತಕ್ಕಂತೆ ನಮ್ಮ ಕೆಲವು ರೋಟರಿ ದಂಪತಿಗಳು ವೇದಿಕೆಯಲ್ಲಿ ನೃತ್ಯ ಮಾಡಿದರು.

❖ ರೊ.ಎಸ್.ಜಿ. ಗೋಪಾಲ್ ಮತ್ತು ರೊ. ರಮಾಗೋಪಾಲ್
❖ ರೊ. ಸಂದೀಪ್ ಮತ್ತು ರೊ. ವನಿತಾ ಸಂದೀಪ್
❖ ರೊ. ಜಗದೀಶ್ ಕಾಮತ್ ಮತ್ತು ಭಾರತೀಕಾಮತ್
❖ ರೊ. ಹೆಚ್.ಎಸ್. ಮೋಹನ್ ಮತ್ತು ರೊ. ಪೂರ್ಣಿಮ ಮೋಹನ್
❖ ರೊ. ಎಸ್. ಎನ್. ನಾಗರಾಜ್ ಮತ್ತು ಶ್ರೀಮತಿ ರಶ್ಮಿ ನಾಗರಾಜ್
❖ ರೊ. ಎನ್. ಚಂದ್ರಪ್ಪ ಮತ್ತು ರೊ. ಶ್ರೀಮತಿ ಗೀತಾ

ಇವರುಗಳು ಪರಸ್ಪರ ಮಾಲೆ ಬದಲಾಯಿಸಿಕೊಂಡು ಸಂಭ್ರಮಿಸಿದರು. ಅಂದಿನ ಮುಖ್ಯ ಅತಿಥಿ ಶ್ರೀ ಕೆ.ಯುವರಾಜ್‌ರವರಿಗೆ ರೊ.ಪಿಡಿಜಿ. ಡಾ.ಪಿ.ನಾರಾಯಣ, ರೊ.ಟಿ.ಆರ್. ಅಶ್ವಥನಾರಾಯಣ, ರೊ.ವೀರಣ್ಣ ಎ. ಹುಗ್ಗಿ, ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪ ಮತ್ತು ಕಾರ್ಯದರ್ಶಿ ರೊ.ಎನ್. ಜಿ ಉಷಾರವರು ಜೊತೆಗೂಡಿ ಸನ್ಮಾನಿಸಿದರು. ಕೊನೆಯಲ್ಲಿ ರೊ. ಶೋಭಾ ರುದ್ರೇಶ್‌ರವರು ವಂದನಾರ್ಪಣೆ ಮಾಡಿದರು.



**ಕಾರ್ಯಕ್ರಮದ ನಂತರ ಪುಷ್ಕಳ ಭೋಜನವನ್ನು ರೋಟರಿ ಸದಸ್ಯರು ಸವಿದರು. ಭೋಜನಕ್ಕಾಗಿ ರೊ.ಎಸ್. ಜಿ ಗೋಪಾಲ್ ಮತ್ತು ರಮಾ ಗೋಪಾಲ್ ದಂಪತಿಗಳು ರೂ.5,000.00 ಮತ್ತು ರೊ. ಹೆಚ್.ಎಸ್. ಮೋಹನ್ ಮತ್ತು ಶ್ರೀಮತಿ ಪೂರ್ಣಿಮ ಮೋಹನ್ ದಂಪತಿಗಳು ರೂ. 5,000.00 ದೇಣಿಗೆ ನೀಡಿರುತ್ತಾರೆ. ಅವರಿಗೆ ರೋಟರಿಯ ಎಲ್ಲಾ ಸದಸ್ಯರುಗಳ ಪರವಾಗಿ ಧನ್ಯವಾದಗಳು.**



ರೋಟರಿ ವಲಯಮಟ್ಟದ ಚಿತ್ರಗೀತೆ ಸ್ಪರ್ಧೆಯಲ್ಲಿ ರೊ. ಎಂ.ಎನ್.ಎಸ್.ಮಣಿ ದ್ವಿತೀಯ ಸ್ಥಾನ ಹಾಗೂ ಭಾವಗೀತೆ ಸ್ಪರ್ಧೆಯಲ್ಲಿ ವನಿತಾ ಸಂದೀಪ್‌ರವರು ದ್ವಿತೀಯ ಸ್ಥಾನ ಪಡೆದಿರುತ್ತಾರೆ.





ನಮ್ಮ ಕ್ಲಬ್‌ನಿಂದ ಶಿಕಾರಿಪುರದ ವಲಯ ಮಟ್ಟದ ಕಾರ್ಯಕ್ರಮಕ್ಕೆ 17 ಸದಸ್ಯರು ಭಾಗವಹಿಸಿದ್ದರು.



ಗ್ರೂಪ್ ಸಾಂಗ್‌ನಲ್ಲಿ ಭಾಗವಹಿಸಿದ ನಮ್ಮ ಕ್ಲಬ್ ಸದಸ್ಯರು



ಏಕಪಾತ್ರ ಅಭಿನಯ ಸ್ಪರ್ಧೆಯಲ್ಲಿ ರೊ. ಎನ್.ಜಿ. ಉಷಾರವರು ಭಾಗವಹಿಸಿದ್ದರು.




ನೃತ್ಯ ಸ್ಪರ್ಧೆಯಲ್ಲಿ ರೊಟೇರಿಯನ್ ವನಿತಾ ಸಂದೀಪ್‌ರವರ ಮಗಳು ಸಾನ್ವಿ




ಯುಗಳ ಗೀತೆ ಸ್ಪರ್ಧೆಯಲ್ಲಿ ರೊ. ಎಂಎನ್‌ಎಸ್ ಮಣಿ ಮತ್ತು ರೊ. ಸುಮಲತಾ





ಹೊಯ್ಸಳ ಕಾಲೇಜ್ ಆಫ್ ಮ್ಯಾನೇಜ್ಮೆಂಟ್‌ನಲ್ಲಿ ನಮ್ಮ ಕ್ಲಬ್‌ನಿಂದ ವಿದ್ಯಾರ್ಥಿಗಳಿಗೆ ಟ್ರೈನಿಂಗ್ ಪ್ರೋಗ್ರಾಮ್ ಏರ್ಪಡಿಸಲಾಗಿತ್ತು. ರೊ. ಹೆಚ್. ಎಸ್. ಮೋಹನ್‌ರವರು ಸಂಪನ್ಮೂಲ ವ್ಯಕ್ತಿಯಾಗಿ ಸೇಲ್ಸ್ ಅಂಡ್ ಡಿಜಿಟಲ್ ಮಾರ್ಕೆಟಿಂಗ್ ವೆಬ್‌ಸ್ಟೋರ್ಸ್ ಬಗ್ಗೆ ವಿವರವಾಗಿ ಮಾಹಿತಿ ನೀಡಿ ಮಾರ್ಗದರ್ಶನ ಮಾಡಿದರು. ರೊ. ಕೆ. ಸೂರ್ಯನಾರಾಯಣ ಉಡುಪ, ರೊ. ಎನ್.ಜಿ. ಉಷಾ, ರೊ. ಕಿಶೋರ್ ಶೀರ್ನಾಳಿ, ರೊ. ಅಜೇಯ್ ಕುಮಾರ್ ಹಾಗೂ ಕಾಲೇಜಿನ ಪ್ರಿನ್ಸಿಪಾಲ್ ವಿಲಿಯಂ ಡಿಸೋಜಾರವರು ಉಪಸ್ಥಿತರಿದ್ದರು.






ವಾರದ ಸಭೆಯಲ್ಲಿ ರೋಟರಿ ಸದಸ್ಯರು



## ಸಂಪಾದಕೀಯ

### ಯಶಸ್ಸಿನ ಒಳದಾರಿಗಳಿಲ್ಲ

ಒಮ್ಮೆ ಸಮರ ಕಲೆಗಳಲ್ಲಿ ಒಂದು ಮಟ್ಟಕ್ಕೆ ಸಾಧನೆ ಮಾಡಿದ್ದ ಯುವಕನೊಬ್ಬ ಇದರಲ್ಲಿ ಅತ್ಯುಧ್ಬುತವಾದದ್ದನ್ನು ಸಾಧಿಸಿದ್ದ ಗುರುವೊಬ್ಬನ ಬಳಿ ಬಂದ. 'ಗುರುಗಳೇ ನಾನು ಸಮರ ಕಲೆಗಳಲ್ಲಿ ನಿಮ್ಮಂತೆ ಅತ್ಯಂತ ದೊಡ್ಡ ಸಾಧಕನಾಗ್ಬೇಕು ಎಂದಿದ್ದೇನೆ. ಈ ರೀತಿಯ ಯಶಸ್ಸನ್ನು ಗಳಿಸಲು, ನಾನು ನಿಮ್ಮ ಶಿಷ್ಯನಾಗಲು ಬಯಸುತ್ತೇನೆ. ಇದರಲ್ಲಿ ನಿಮ್ಮಂತೆ ಅತ್ಯುನ್ನತ ಹಂತಕ್ಕೇರಲು ನನಗೆ ಎಷ್ಟು ವರ್ಷಗಳ ಸಾಧನೆಯ ಅಗತ್ಯವಿದೆ' ಎಂದು ಪ್ರಶ್ನಿಸಿದ. ಆಗ ಆ ಗುರು ಸ್ವಲ್ಪ ಯೋಚಿಸಿ 'ಸುಮಾರು ಹತ್ತು ವರ್ಷ ಬೇಕಾಗಬಹುದು' ಎಂದ.

ಈ ಮಾತನ್ನು ಕೇಳಿ ಅವಕ್ಕಾದ ಯುವಕ 'ಅಯ್ಯೋ ಅಷ್ಟು ವರ್ಷ ಕಾಯಲು ನನ್ನಿಂದ ಸಾಧ್ಯವಿಲ್ಲ. ನಾನು ಬೇಕಾದರೆ ಪ್ರತಿದಿನವೂ ಎರಡು ಪಟ್ಟು ಅಭ್ಯಾಸ ಮಾಡುತ್ತೇನೆ. ನನಗೆ ಬೇಗ ಸಾಧಕನಾಗಬೇಕಾಗಿದೆ' ಎಂದು ನುಡಿದ. ಅದಕ್ಕೆ ಆ ವೃದ್ಧ ಗುರು 'ಹಾಗಾದರೆ ನೀನು ಇವತ್ತು ವರ್ಷಗಳ ಅಭ್ಯಾಸವನ್ನು ಖಂಡಿತ ಮಾಡಬೇಕು' ಎಂದು ಹೇಳಿದ.

ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬರು ದಿಢೀರ್ ಯಶಸ್ಸನ್ನು ಬಯಸುತ್ತಾರೆ. ದಿಢೀರ್ ಶ್ರೀಮಂತರಾಗುವುದನ್ನು ಇಷ್ಟಪಡುತ್ತಾರೆ. ಮಾರ್ಗ ಯಾವುದೇ ಇರಲಿ ಹಣ ಗಳಿಕೆ ಬೇಗ ಆಗಬೇಕು ಎಂಬುದೇ ಎಲ್ಲರ ಆಸೆ. ಆದರೆ ಯಾವುದೇ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕಾದರೆ, ಆಳಕ್ಕಿಳಿದು ಅಧ್ಯಯನ ಹಾಗೂ ನಿರಂತರ ಅಭ್ಯಾಸ ಮಾಡಬೇಕು. ಯಶಸ್ಸಿಗೆ ಯಾವುದೇ ಒಳದಾರಿಗಳಿಲ್ಲ. ಕಠಿಣ ಪರಿಶ್ರಮ ಒಂದೇ ಯಶಸ್ಸಿನ ಸರಿಯಾದ ಮಾರ್ಗ. ಶತಕಗಳ ಶತಕ ಬಾರಿಸಿದ ಸಚಿನ್ ತೆಂಡೂಲ್ಕರ್, ಅತ್ಯದ್ಭುತ ಟೆನ್ನಿಸ್ ಪ್ರತಿಭೆ ರೋಜರ್ ಫೆಡರ್, ಮಿಂಚಿನ ಓಟಗಾರ ಬೋಲ್ಟ್ ಮುಂತಾದ ಕ್ರೀಡಾತಾರೆಯರು ಗಳಿಸಿರುವ ಹೆಸರು ಹಾಗೂ ಸಂಪತ್ತು ನಮ್ಮ ಗಮನ ಸೆಳೆಯುತ್ತದೆ. ಆದರೆ ಆ ಸಂಪತ್ತಿನ ಗಳಿಕೆ ಹಿಂದಿರುವ ಅವರ ಕಠಿಣ ಪರಿಶ್ರಮ ನಮ್ಮ ಅರಿವಿಗೆ ಬರುವುದೇ ಇಲ್ಲ.

ಅದೇ ರೀತಿ ಪ್ರಖ್ಯಾತ ಸಂಗೀತಗಾರರಾದ ಪಂಡಿತ್ ಭೀಮಸೇನ ಜೋಶಿ, ಎಂ.ಎಸ್. ಸುಬ್ಬಲಕ್ಷ್ಮಿ, ಎಸ್.ಪಿ. ಬಾಲಸುಬ್ರಮಣ್ಯಂ ಮುಂತಾದವರು ಅತ್ಯುನ್ನತ ಮಟ್ಟದ ಸಾಧನೆ ಮಾಡಲು ಸಾಧ್ಯವಾಗಿದ್ದು ಅವರ ಅವಿರತ ಪರಿಶ್ರಮದಿಂದ. ಸಾಹಿತ್ಯ ಕ್ಷೇತ್ರದ ದಿಗ್ಗಜರಾದ ಕುವೆಂಪು, ಬೇಂದ್ರೆ, ಕಾರಂತ ಮುಂತಾದವರ ಸಾಹಿತ್ಯಿಕ ಸಾಧನೆಯ ಬೃಹತ್ ವೃಕ್ಷದಡಿಯಲ್ಲಿ ಅವರ ಆಳವಾದ ಅಧ್ಯಯನದ ಬೇರುಗಳಿರುವುದನ್ನು ನಾವೆಂದಿಗೂ ಮರೆಯುವಂತಿಲ್ಲ.

'ಹತ್ತೆಡೆಯೊಳು ತೋಡಿ, ಒಂದಡಿಯಷ್ಟನು ಬರಲಿಲ್ಲ ನೀರು ಎಂದೆನಬೇಡ ಒಂದೆಡೆಯಲಿ ತೋಡು ಹತ್ತಿಡಿಯಷ್ಟು ಚಿಮ್ಮುವುದು ಉದಕವು ನೋಡ' ಎಂಬುದಾಗಿ ಕವಿ ಎಸ್.ವಿ. ಪರಮೇಶ್ವರ ಭಟ್ಟರು ಹೇಳುತ್ತಾರೆ. ಹತ್ತು ಕಡೆಯಲ್ಲಿ ಒಂದಡಿ ತೋಡಿದರೆ ನೀರು ಸಿಕ್ಕುವುದಿಲ್ಲ. ಅದೇ ಒಂದೇ ಕಡೆಯಲ್ಲಿ ಆಳಕ್ಕಿಳಿದು ತೋಡಿದಾಗ ಖಂಡಿತವಾಗಿಯು ನೀರು ಚಿಮ್ಮುತ್ತದೆ. ಹಾಗೆಯೇ ಸಾಧನೆ ಎಂಬುದು ಆಳಕ್ಕಿಳಿದು ಪರಿಶ್ರಮಪಟ್ಟು ಕಾಯಕ ಮಾಡಿದಾಗ ಮಾತ್ರ ಲಭ್ಯವಾಗುವಂಥದ್ದು. ಇದಕ್ಕೆ ನಮ್ಮಲ್ಲಿ ತಾಳ್ಮೆ ಅತ್ಯಗತ್ಯ. 'ತಾಳುವಿಕೆಗಿಂತ ಅನ್ಯ ತಪವಿಲ್ಲ' ಎಂಬ ಮಾತಿನಂತೆ ತಾಳ್ಮೆ ಎಂಬುದು ತಪಸ್ಸಿನಂತೆ. ಸಾಧಕರ ಯಶಸ್ಸಿನ ಗುಟ್ಟೇ ಅವರ ಅವಿರತ ಪರಿಶ್ರಮ ಹಾಗೂ ಅನನ್ಯವಾದ ತಾಳ್ಮೆ. ನಾವು-ನೀವು ಇದೇ ತಾಳ್ಮೆ, ಪರಿಶ್ರಮ ವಹಿಸಿ ಸಾಧನೆ ಮಾಡಲು ಶ್ರಮಿಸೋಣವೇ...!?

• ರೊ. ಎಂ. ಮಾಧವಾಚಾರ್

---

**ಚಿಂತನ**

**ಎಲ್ಲರನ್ನು ಸಂತೋಷಪಡಿಸಲು**
**ನಮಗೆ ಸಾಧ್ಯವಾಗದೇ ಇರಬಹುದು.**
**ಆದರೆ ಎಲ್ಲರೊಂದಿಗೂ ಸಂತೋಷದಿಂದಿರುವುದು ನಮಗೆ**
**ಸಾಧ್ಯ. ಆದ್ದರಿಂದ ಸ್ನೇಹದ ಬಣ್ಣ ಅರಳಿಸುತ್ತಾ,**
**ನಗುತ್ತಾ, ನಗೆ ಹಂಚುತ್ತಾ ಸಂತೋಷದಿಂದ ಬಾಳೋಣ.**

**- ರೊ. ಕೆ. ಸೂರ್ಯನಾರಾಯಣ ಉಡುಪ**



ಇನ್ನರ್‌ವ್ಹೀಲ್ ಕ್ಲಬ್ ಕಾರ್ಯಕ್ರಮದಲ್ಲಿ ನಮ್ಮ ರೋಟರಿ ಕ್ಲಬ್ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರವರು 'ನೇಹಾ' ಬುಲೆಟಿನ್ ಬಿಡುಗಡೆ ಮಾಡಿದರು.

## ಜನ್ಮ ದಿನದ ಶುಭಾಶಯಗಳು



Manjunath S.
8th Nov.



Anitha Senthilvelan
09th Nov



Dr.Raksha Rao
10th Nov.



Sathynarayan B N
13th Nov

## ಶಿಕಾರಿಪುರದಲ್ಲಿ ನಡೆದ ವಲಯ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ ನಮ್ಮ ರೋಟರಿ ಸದಸ್ಯರು

ದಿನಾಂಕ: 27.10.2024 ರಂದು ಶಿಕಾರಿಪುರ ರೋಟರಿ ಕದಂಬದವರು ಆಯೋಜಿಸಿದ್ದ ವಲಯ 10 ರ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನಮ್ಮ ಕ್ಲಬ್‌ನ ಸದಸ್ಯರು ಪಾಲ್ಗೊಂಡು ರೊ.ಎಂ.ಎನ್.ಎಸ್.ಮಣಿ-ಚಿತ್ರಗೀತೆಯಲ್ಲಿ ಎರಡನೇ ಬಹುಮಾನ ಮತ್ತು ರೊ.ವನಿತಾ ಸಂದೀಪ್‌ರವರು ಭಾವಗೀತೆಯಲ್ಲಿ ಎರಡನೇ ಬಹುಮಾನ ಪಡೆದರು.

ರೊ.ಎಂ.ಎನ್. ಎಸ್. ಮಣಿಯವರು ಮತ್ತು ರೊ.ಸುಮಲತಾ ಭೂಪಾಳಂರವರು ಯುಗಳ ಗೀತೆಯಲ್ಲಿ, ಸಮೂಹ ಗೀತೆಯಲ್ಲಿ ರೊ.ಎಂ.ಎನ್.ಎಸ್ ಮಣಿ, ರೊ.ವನಿತಾ ಸಂದೀಪ್, ರೊ.ಕಿಶೋರ್ ಶೀರನಾಳಿ, ರೊ. ವೈ.ವಿ.ವೆಂಕಟರಮಣ ಜೋಯ್ಸ್, ರೊ.ಮಲ್ಲಿಕಾ ವಿ.ಜೋಯ್ಸ್, ರೊ.ಪ್ರಮೋದ ಶಾಸ್ತ್ರಿ, ರೊ. ಸುಮಲತಾ ಭೂಪಾಳಂ, ರೊ.ಗಾಯತ್ರಿ ಸುಮತೀಂದ್ರ, ಶ್ರೀಮತಿ ಶ್ರೀದೇವಿ ಭಟ್, ಸ್ಕಿಟ್‌ನಲ್ಲಿ ರೊ. ಸಂದೀಪ್‌ರವರ ಮಗಳು ಸಾನ್ವಿ , ಏಕಪಾತ್ರಾಭಿನಯದಲ್ಲಿ ರೊ. ಎನ್. ಜಿ ಉಷಾರವರು ಪಾಲ್ಗೊಂಡಿದ್ದು, ರೊ.ಸುನೀತಾ ಶ್ರೀಧರ್, ರೊ.ಕೆ.ಸೂರ್ಯನಾರಾಯಣ ಉಡುಪರು, ರೊ.ಟಿ.ಕೆ.ಎಂ. ಭಟ್ ಮತ್ತು ರೊ.ವೀರಣ್ಣ ಎ. ಹುಗ್ಗಿಯವರು ಜೊತೆಗಿದ್ದು ಪ್ರೋತ್ಸಾಹ ನೀಡಿದರು.

**ಚತುರ್ವಿಧ ಪರೀಕ್ಷೆ- ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**

To,

*Book Post*